

بِسْمِ اللّٰہِ الرَّحْمٰنِ الرَّحِیْمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 16–08–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

اَشْهَدُ اَنْ لَّا اِلٰهَ اِلَّا اللّٰهُ وَحْدَهٗ لَا شَرِيْكَ لَهٗ وَ اَشْهَدُ اَنَّ مُحَمَّدًا عَبْدُهٗ وَ رَسُوْلُهٗ ـ اَمَّا بَعْدُ

فَاَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ ـ

اَلْحَمْدُ لِلّٰهِ رَبِّ الْعٰلَمِيْنَ ۙ الرَّحْمٰنِ الرَّحِيْمِ ۙ مٰلِكِ يَوْمِ الدِّيْنِ ۙ اِيَّاكَ نَعْبُدُ وَ اِيَّاكَ نَسْتَعِيْنُ ۙ

اِهْدِنَا الصِّرَاطَ الْمُسْتَقِيْمَ ۙ صِرَاطَ الَّذِيْنَ اَنْعَمْتَ عَلَيْهِمْ ۙ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۙ

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ಕೆಲವು ಖುತ್‌ಬಗಳಲ್ಲಿ ಪ್ರಸ್ತಾಪಿಸುತ್ತಾ ಇದ್ದ ಹಾಗೆ ಇಂದು ಸಹ ನಾನು ಬದರೀ ಸಹಾಬರ ಬಗ್ಗೆಯೇ ಪ್ರಸ್ತಾಪಿಸಲಿರುವೆನು. ಇಂದು ನಾನು ಮೊದಲು ಪ್ರಸ್ತಾಪಿಸುವುದು ಹಝ್ರತ್ ಖತ್ತಾದ ಬಿನ್ ನುಅ್‌ಮಾನ್ ಅನ್‌ಸಾರಿ(ರ) ಬಗ್ಗೆಯಾಗಿದೆ. ಅವರು ಅನ್‌ಸಾರ್‌ಗಳ ಖಝ್‌ರಜ್ ಗೋತ್ರದ ಬನೂ ಝುಫರ್ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರ ಪಿತ ನುಅ್‌ಮಾನ್ ಬಿನ್ ಝೈದ್. ಮಾತೆ ಅನೀಸ ಬಿನ್ತ್ ಖೈಸ್. ಅವರಿಗೆ ಅಬೂ ಉಮರ್, ಅಬೂ ಅಮರ್ ಮತ್ತು ಅಬೂ ಅಬ್ದುಲ್ಲ ಎಂಬ ಉಪನಾಮಗಳಿದ್ದುವು. ಹಝ್ರತ್ ಖತ್ತಾದ ಹಝ್ರತ್ ಅಬೂ ಸಈದ್ ಖುದ್‌ರೀಯವರ ಅಖ್‌ಯಾಫಿ ಸಹೋದರರಾಗಿದ್ದರು. ಎಂದರೆ ತಾಯಿಯ ಕಡೆಯಿಂದ ಸಹೋದರ (ತಂದೆ ಬೇರೆ). ಅವರು ಎಪ್ಪತ್ತು ಅನ್‌ಸಾರಿ ಸಾಹಬರೊಂದಿಗೆ ಬೈಅತೆ ಅಖಬದಲ್ಲಿ ಭಾಗವಹಿಸುವ ಭಾಗ್ಯ ಪಡೆದಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಶ್ಚಯಿಸಿದ ಬಿಲ್ಲುಗಾರರಲ್ಲಿ ಅವರೊಬ್ಬರಾಗಿದ್ದರು. ಅವರು ಬದರ್, ಉಹುದ್, ಖಂದಕ್ ಮತ್ತು ಇತರ ಎಲ್ಲ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಭಾಗವಹಿಸಿದ್ದರು. ಉಹುದ್ ಯುದ್ಧದ ದಿನ ಶತ್ರುಗಳ ಬಾಣ ಕಣ್ಣಿಗೆ ತಾಗಿದಾಗ ಅವರ ಕಣ್ಣುಗುಡ್ಡೆ ಹೊರಗೆ ಬಂತು. ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋದಾಗ ಅವರು ಆ ಕಣ್ಣನ್ನು ತನ್ನ ಕೈಯಲ್ಲಿ ಎತ್ತಿ ಹಝ್ರತ್ ಖತ್ತಾದರ ಕಣ್ಣಿದ್ದ ಸ್ಥಳದಲ್ಲಿ ಇರಿಸಿದರು. ಅದು ಸರಿಯಾಗಿ ಸ್ಥಾಪಿತವಾಗಿ ದೃಷ್ಟಿ ಮರಳಿ ಬಂತು. ವೃದ್ಧಾಪ್ಯದಲ್ಲಿ ಸಹ ಅವರ ಎರಡು ಕಣ್ಣುಗಳಲ್ಲಿ ಈ ಕಣ್ಣು ಹೆಚ್ಚು ಬಲಿಷ್ಠವೂ ಸರಿಯಾಗಿ ದೃಷ್ಟಿಯುಳ್ಳದ್ದೂ ಆಗಿತ್ತು. ಒಂದು ವರದಿ ಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಕಣ್ಣಿಗೆ ತನ್ನ ಜೊಲ್ಲು ಒರಸಿದರು. ಅದರ ಪರಿಣಾಮವಾಗಿ ಆ ಕಣ್ಣು ಹೆಚ್ಚು ಸುಂದರವಾಯಿತು. ಹಝ್ರತ್ ಖತ್ತಾದ ಸ್ವತಃ ಈ ಘಟನೆಯನ್ನು ಹೀಗೆ ವಿವರಿಸಿದ್ದಾರೆ. ಉಹುದ್ ಯುದ್ಧದ ದಿನ ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖಕ್ಕೆ ಅಡ್ಡವಾಗಿ ನಿಂತಿದ್ದೆ. ಆ ರೀತಿ ನಾನೊಂದು ಗುರಾಣಿಯ ಹಾಗಿದ್ದೆ. ಯುದ್ಧ ನಡೆಯುವಾಗ ಒಂದು ಬಾಣ ನನ್ನ ಕಣ್ಣಿಗೆ ತಾಗಿತು. ಆಗ ನನ್ನ ಕಣ್ಣುಗುಡ್ಡೆ ಹೊರಗೆ ಬಂದು ನನ್ನ ಕೆನ್ನೆಯ ಮೇಲೆ ಆದಾಗ ನಾನು ಅದನ್ನು ಕೈಯಿಂದ ಹಿಡಿದೆ ಮತ್ತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋದೆನು. ಆಗ ಅವರ ಕಣ್ಣುಗಳಿಂದ ಅಶ್ರುಧಾರೆ ಹೊರಟಿತು. ಅವರು ಹೇಳಿದರು: ಓ ಅಲ್ಲಾಹ್, ಖತ್ತಾದ ತನ್ನ ಮುಖವನ್ನು ಅಡ್ಡವಾಗಿ ಇರಿಸಿ ನಿನ್ನ ಪ್ರವಾದಿಯ ಮುಖವನ್ನು ರಕ್ಷಿಸಿದ್ದಾರೆ. ನೀನು ಅವರ ಎರಡು ಕಣ್ಣುಗಳಲ್ಲಿ ಈ ಕಣ್ಣನ್ನು ಹೆಚ್ಚು ಸುಂದರವೂ ಒಳ್ಳೆಯ ದೃಷ್ಟಿಯುಳ್ಳದ್ದಾಗಿಯೂ ಮಾಡು ಎಂದು ಪ್ರಾರ್ಥಿಸಿದರು.

ಹಝ್ರತ್ ಖತ್ತಾದ ಖಂದಕ್ ಯುದ್ಧ ಸಮೇತ ಇತರ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದರು. ಮಕ್ಕದ ವಿಜಯದ ದಿನ ಬನೂ ಝುಫರ್ ಗೋತ್ರದ ಪತಾಕೆ ಅವರ ಕೈಯ್ಯಲ್ಲಿತ್ತು. ಅವರು ಹಿಜರಿ ವರ್ಷ 23ರಲ್ಲಿ ತನ್ನ 65 ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು. ಹಝ್ರತ್ ಉಮರ್(ರ) ಅವರ ನಮಾಝೆ ಜನಾಝವನ್ನು ಮದೀನದಲ್ಲಿ ನಿರ್ವಹಿಸಿದರು. ಹಝ್ರತ್ ಖತ್ತಾದ ಬಿನ್ ನುಅ್‌ಮಾನ್(ರ) ಹೇಳುತ್ತಾರೆ: ಅನ್‌ಸಾರ್‌ಗಳ ಒಂದು ಕುಟುಂಬದ ಹೆಸರು ಬನೂ ಅಬೀರಕ್ ಎಂದಾಗಿತ್ತು. ಆ ಕುಟುಂಬದಲ್ಲಿ ಮೂರು ಸಹೋದರರಿದ್ದರು. ಅವರು ಅಜ್ಞಾನ ಕಾಲದಲ್ಲಿಯೂ ಮುಸ್ಲಿಮರಾದ ನಂತರವೂ ಬಡವರೂ ಸಾಕಷ್ಟು ಆಹಾರವಿಲ್ಲದವರೂ ಆಗಿದ್ದರು. ಮುಸ್ಲಿಮರಾದ ನಂತರ ಸಹ ಅವರ ಸ್ಥಿತಿಯಲ್ಲಿ ಬದಲಾವಣೆ ಉಂಟಾಗಲಿಲ್ಲ. ಅವರು ದುಡಿಮೆ ಮಾಡದವರಾದ ಕಾರಣ ಬಡವರಾಗಿದ್ದರು. ಒಮ್ಮೆ ನನ್ನ ಚಿಕ್ಕಪ್ಪ ರಿಫಾಅ್ ಬಿನ್ ಝೈದರ ಗೋದಾಮಿಗೆ ಕನ್ನ ಹಾಕಿ ಕಳ್ಳರು ಗೋಡೆ ಒಡೆದು ಒಳಗೆ ಪ್ರವೇಶಿಸಿ ಆಹಾರ ಪದಾರ್ಥ ಮತ್ತು ಆಯುಧಗಳನ್ನು ಕದ್ದಿದ್ದರು. ಬೆಳಗ್ಗೆ ಚಿಕ್ಕಪ್ಪ ನನ್ನ ಬಳಿಗೆ ಬಂದು ಹೇಳಿದರು: ಓ ನನ್ನ ಸಹೋದರ ಪುತ್ರ, ಕಳೆದ ರಾತ್ರಿ ನನ್ನ ಮೇಲೆ ದೌರ್ಜನ್ಯ ನಡೆಸಲಾಗಿದೆ. ನನ್ನ ಗೋದಾಮಿಗೆ ಕನ್ನ ಹಾಕಿ ಆಹಾರ ಸಾಮಗ್ರಿ ಮತ್ತು ಆಯುಧಗಳನ್ನೆಲ್ಲಾ ಕಳ್ಳರು ಕದ್ದಿದ್ದಾರೆ ಎಂದು ಹೇಳಿದರು. ನಾವು ನಮ್ಮ ಬಡಾವಣೆಯಲ್ಲಿ ತಪಾಸಣೆ ನಡೆಸಿದೆವು. ಜನರೊಂದಿಗೆ ಕಳವಿನ ವಿಚಾರ ಹೇಳಿದಾಗ ಜನರು ಹೇಳಿದರು: ನಾವು ಬನೂ ಅಬೀರಕ್‌ಗೆ ಸೇರಿದ ಜನರನ್ನು ಕಳೆದ ರಾತ್ರಿ ಕಂಡಿದ್ದೇವೆ. ಅವರು ಬೆಂಕಿ ಉರಿಸಿ ಇಟ್ಟಿದ್ದರು. ಅವರು ನಿಮ್ಮ ಆಹಾರ ಪದಾರ್ಥ ಬಳಸಿಯೇ ಸಂಭ್ರಮಿಸಿರಬಹುದು. ಚಿಕ್ಕಪ್ಪ ಹೇಳಿದರು: ಓ ನನ್ನ ಸಹೋದರ ಪುತ್ರ, ನೀನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ಈ ಕಳುವಿನ ಬಗ್ಗೆ ತಿಳಿಸಿದರೆ ನನ್ನ ಸಂಪತ್ತು ನನಗೆ ಮರಳಿ ದೊರಕಬಹುದು. ಹಾಗೆ ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ಹೇಳಿದೆ: ನಮ್ಮ ಜನರ ಪೈಕಿಯೇ ಒಂದು ಕುಟುಂಬದವರು ದೌರ್ಜನ್ಯ ಮಾಡಿದ್ದಾರೆ. ಅವರು ನನ್ನ ಚಿಕ್ಕಪ್ಪನವರ ಗೋದಾಮಿಗೆ ಕನ್ನಹಾಕಿ ಆಹಾರ ಪದಾರ್ಥ ಮತ್ತು ಆಯುಧ ಕದ್ದಿದ್ದಾರೆ

ಎಂದು ಹೇಳಿದೆ. ಇದು ಬನೂ ಅಬೀರಕ್ ಕುಟುಂಬದವರಿಗೆ ತಿಳಿದಾಗ ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ಹೇಳಿದರು: ಓ ಅಲ್ಲಾಹನ ರಸೂಲರೇ, ಖತ್ತಾದ ಬಿನ್ ನುಅ್‌ಮಾನ್ ಮತ್ತು ಅವರ ಚಿಕ್ಕಪ್ಪ ನಮ್ಮ ಜನರ ಪೈಕಿ ಒಂದು ಮನೆಯವರ ವಿರುದ್ಧ, ಮುಸ್ಲಿಮರಾದ ಒಳ್ಳೆಯ ಜನರ ವಿರುದ್ಧ ಕಳ್ಳತನದ ಆರೋಪವನ್ನು ಯಾವುದೇ ಸಾಕ್ಷ್ಯಾಧಾರವಿಲ್ಲದೆ ಮಾಡುತ್ತಿದ್ದಾರೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನೊಂದಿಗೆ ಹೇಳಿದರು: ಮುಸ್ಲಿಮರೂ ಒಳ್ಳೆಯ ಜನರೂ ಆಗಿರುವ ಒಂದು ಕುಟುಂಬದ ಜನರ ವಿರುದ್ಧ ಕಳ್ಳತನ ಮಾಡಿದ ಆರೋಪವನ್ನು ನೀವು ಮಾಡುತ್ತಿರುವಿರಿ. ನಿಮ್ಮ ಬಳಿ ಸಾಕ್ಷಿಯಾಗಲಿ, ಇತರ ಪುರಾವೆಗಳಾಗಲಿ ಇಲ್ಲ.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಯಿಂದ ನಾನು ಹೊರಟು ಹೋದೆನು. ನಾನು ಹೀಗೆ ಇಚ್ಛಿಸಿದೆ: ನನ್ನ ಸಂಪತ್ತಿನಿಂದ ವಂಚಿತನಾಗಿ ನಾನು ಅದರ ಬಗ್ಗೆ ಆತಂಕಗೊಂಡರೂ ನಾನು ಆ ವಿಷಯ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಬಾರದೆಂದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತುಗಳನ್ನು ಆಲಿಸಿದಾಗ ನಾನು ಯೋಚಿಸಿದೆ, ನಾನು ಅನಾವಶ್ಯಕವಾಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕಷ್ಟ ನೀಡಿದೆ ಎಂದು.

ಅನಂತರ ಅಲ್ಲಾಹನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಂದೇಶವಾಣಿ ಮೂಲಕ ಸತ್ಯವೇನೆಂದು ತಿಳಿಸಿದನು. ಅದರ ಬಗ್ಗೆ ಪವಿತ್ರ ಖುರ್‌ಆನ್ ವಚನಗಳು ಅವತೀರ್ಣಗೊಂಡಾಗ ಬನೂ ಅಬೀರಕ್ ಜನರು ಅದರಲ್ಲಿ ತಮ್ಮ ಬಗ್ಗೆಯೇ ಪ್ರಸ್ತಾಪಿಸಲಾಗಿದೆ ಎಂದು ಮನವರಿಕೆ ಮಾಡಿದರು. ಅವರು ತಾವು ಕದ್ದ ಬಗ್ಗೆ ಒಪ್ಪಿಕೊಂಡರು. ಅವರು ಕದ್ದ ವಸ್ತುಗಳನ್ನೂ ಆಯುಧಗಳನ್ನೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ತಂದರು. ಅವುಗಳನ್ನು ರಿಫಾಅ್‌ರಿಗೆ ಮರಳಿಸಲಾಯಿತು.

ಹಝ್ರತ್ ಅಬೂ ಸಈದ್ ಖುದ್‌ರೀ ವರದಿ ಮಾಡುತ್ತಾರೆ: ಹಝ್ರತ್ ಖತ್ತಾದ ಬಿನ್ ನುಅ್‌ಮಾನ್ ಒಮ್ಮೆ ಸೂರತುಲ್ ಇಖ್‌ಲಾಸ್ ಪಠಿಸುತ್ತಾ ರಾತ್ರಿಯಿಡೀ ಕಳೆದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅದರ ಬಗ್ಗೆ ತಿಳಿಸಿದಾಗ ಅವರು ಹೇಳಿದರು: ಯಾರ ಹಸ್ತದಲ್ಲಿ ನನ್ನ ಜೀವವಿದೆಯೋ ಅವನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ, ಸೂರತುಲ್ ಇಖ್‌ಲಾಸ್ ಪವಿತ್ರ ಖುರ್‌ಆನಿನ ಅರ್ಧಾಂಶಕ್ಕೆ ಅಥವಾ ಮೂರನೆಯ ಒಂದಂಶಕ್ಕೆ ಸಮವಾಗಿದೆ. ಅಲ್ಲಾಹನ ಏಕತ್ವವೇ ನೈಜ ಖುರ್‌ಆನ್ ಆಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಏಕದೇವ ವಿಶ್ವಾಸದ ಉಪದೇಶವೇ ಸಿಗುತ್ತದೆ.

ಅಬೂ ಸಲ್ಮಾ ವರದಿ ಮಾಡುತ್ತಾರೆ: ಹಝ್ರತ್ ಅಬೂ ಹುರೈರ ನಮ್ಮೊಂದಿಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹದೀಸು ವಿವರಿಸುತ್ತಾ ಇದ್ದರು. ಅವರು ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಜುಮುಅದ ದಿನ ಎಂತಹ ಒಂದು ಸಮಯವಿದೆ ಎಂದರೆ ಆ ಸಮಯದಲ್ಲಿ ಒಬ್ಬ ಮುಸ್ಲಿಮನು ನಮಾಝ್ ನಿರ್ವಹಿಸುತ್ತಾ ಇದ್ದು ಒಳಿತನ್ನು ಬೇಡಿಕೊಳ್ಳುತ್ತಾ ಇದ್ದರೆ ಅವನು ಬೇಡಿಕೊಳ್ಳುವುದೆಲ್ಲಾ ಅಲ್ಲಾಹನು ಅವನಿಗೆ ನೀಡುವನು. ಹಝ್ರತ್ ಅಬೂ ಹುರೈರ ತನ್ನ ಕೈಯಿಂದ ಸೂಚಿಸುತ್ತಾ ಹೇಳಿದರು ಆ ಸಮಯದ ಕಾಲಾವಧಿ ಬಹಳ ಚಿಕ್ಕದಾಗಿದೆ ಎಂದು. ಹಝ್ರತ್ ಅಬೂ ಹುರೈರ ನಿಧನ ಹೊಂದಿದ ನಂತರ ನಾನು ಯೋಚಿಸಿದೆ ನಾನು ಹಝ್ರತ್ ಅಬೂ ಸಈದ್ ಖುದ್‌ರಿ ಬಳಿಗೆ ಹೋದರೆ ಆ ವಿಶಿಷ್ಟ ಸಮಯದ ಬಗ್ಗೆ ವಿಚಾರಿಸುವೆನು. ಅವರಿಗೆ ಅದರ ಬಗ್ಗೆ ತಿಳಿದಿರಲೂಬಹುದೆಂದು. ನಾನು ಹಝ್ರತ್ ಅಬೂ ಸಈದ್ ಖುದ್‌ರಿಯನ್ನು ಒಮ್ಮೆ ಭೇಟಿಯಾದಾಗ ಕೇಳಿದೆ: ಹಝ್ರತ್ ಅಬೂ ಹುರೈರ ಜುಮುಅ ದಿನದ ಒಂದು ವಿಶಿಷ್ಟ ಸಮಯದ ಬಗ್ಗೆ ಹದೀಸ್ ಹೇಳಿದ್ದಾರೆ: ದುಆ ಅಂಗೀಕರಿಸಲ್ಪಡುವ ಆ ವಿಶಿಷ್ಟ ಸಮಯದ ಬಗ್ಗೆ ತಮಗೆ ತಿಳಿದಿದೆಯೇ? ಅವರು ಹೇಳಿದರು: ನಾನು ಆ ವಿಶಿಷ್ಟ ಸಮಯದ ಬಗ್ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ವಿಚಾರಿಸಿದಾಗ ಅವರು ಹೇಳಿದರು: ಆ ವಿಶಿಷ್ಟ ಸಮಯ ಯಾವಾಗ ಎಂದು ನನಗೆ ತಿಳಿಸಲಾಗಿತ್ತು. ಆದರೆ ಲೈಲತುಲ್ ಖದರ್ ದಿನದ ಬಗ್ಗೆ ಮರೆತ ಹಾಗೆ ಅದು ಸಹ ಮರೆತು ಹೋಯಿತು.

ಮುಸ್‌ನದ್ ಅಹ್ಮದ್ ಬಿನ್ ಹಂಬಲ್‌ನಲ್ಲಿ ಜುಮುಅದ ಆ ವಿಶಿಷ್ಟ ಸಮಯದ ಬಗ್ಗೆ ವರದಿಗಳಿವೆ. ವಿವಿಧ ವರದಿಗಳಿಂದ ಮೂರು ವಿವಿಧ ಸಮಯಗಳ ಬಗ್ಗೆ ತಿಳಿಯುತ್ತದೆ. ಒಂದು ಜುಮುಅದ ಕಾಲದಲ್ಲಿ ಬರುವ ಸಮಯ. ಇನ್ನೊಂದು ಜುಮುಅ ದಿನದ ಕೊನೆಯ ಭಾಗದಲ್ಲಿ ಬರುತ್ತದೆ. ಮೂರನೆಯದು ಅಸರ್ ನಮಾಝ್ ನಂತರದ ಸಮಯ. ಹಝ್ರತ್ ಅಬೂ ಹುರೈರ ಹೀಗೆ ವರದಿ ಮಾಡಿದ್ದಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜುಮುಅದ ದಿನದ ಬಗ್ಗೆ ಹೇಳಿದರು: ಅದರಲ್ಲಿ ಒಂದು ವಿಶಿಷ್ಟ ಘಳಿಗೆ ಹೇಗಿದೆ ಎಂದರೆ ಆ ಸಮಯದಲ್ಲಿ ದಾಸನು ನಮಾಝ್ ಅನುಷ್ಠಿಸುತ್ತಾ ಇರುವಾಗ ಅವನು ಅಲ್ಲಾಹನೊಡನೆ ಬೇಡಿಕೊಂಡದ್ದೆಲ್ಲಾ ಅವನಿಗೆ ದೊರಕುವುದು. ಆ ವಿಶಿಷ್ಟ ಘಳಿಗೆ ಬಹಳ ಅಲ್ಪ ಕಾಲಾವಧಿಯದೆಂದು ಅವರು ತನ್ನ ಕೈಯಿಂದ ಸೂಚಿಸಿದರು. ಸಹೀಹ್ ಮುಸ್ಲಿಮ್‌ನಲ್ಲಿ ಒಂದು ವರದಿ ಹೀಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಆ ಸಮಯ ಇಮಾಮ್ ಕುಳಿತುಕೊಳ್ಳುವ ಮೊದಲುಗೊಂಡು ನಮಾಝ್ ಮುಕ್ತಾಯಗೊಳ್ಳುವ ತನಕ ಇರುವುದಾಗಿದೆ. ಹಝ್ರತ್ ಅಬ್ದುಲ್ಲಾ ಬಿನ್ ಸಲಾಮ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಆ ವಿಶಿಷ್ಟ ಸಮಯ ಜುಮುಅ ದಿನದ ಕೊನೆಯ ಭಾಗದಲ್ಲಿದೆ. ಎಂದರೆ ಹಗಲು ಕೊನೆಗೊಳ್ಳುವುದಕ್ಕೆ ಸಮೀಪವಾಗಿದೆ. ಹಝ್ರತ್ ಅಬ್ದುಲ್ಲ ಬಿನ್ ಸಲಾಮ್ ನಿವೇದಿಸಿದರು: ಅದು ನಮಾಝ್ ಮಾಡುವ ಸಮಯವೇ? ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಏಕೆ ಹಾಗೆ ಆಗಲಾರದು? ಸತ್ಯವಿಶ್ವಾಸಿಯಾದ ದಾಸ ನಮಾಝ್ ನಿರ್ವಹಿಸಿದ ನಂತರ ಕುಳಿತುಕೊಂಡಿರುವುದಾದರೆ ಮತ್ತು ನಮಾಝ್ ಕಾರಣದಿಂದಲೇ ಅವನು ಕುಳಿತಿರುವನಾದರೆ ಅವನು ನಮಾಝ್ ನಿರ್ವಹಿಸುವ ಸ್ಥಿತಿಯಲ್ಲಿಯೇ ಇರುತ್ತಾನೆ. ಹಝ್ರತ್ ಅಬೂ ಹುರೈರ ಇನ್ನೊಂದು ವರದಿಯಲ್ಲಿ

ಹೇಳುತ್ತಾರೆ: ಜುಮುಅದ ದಿನದ ಆ ವಿಶಿಷ್ಟ ಸಮಯ ಅಸರ್ ನಮಾಝ್ ನಂತರದ ಕಾಲವೇ ಆಗಿದೆ. ಇನ್ನೊಂದು ವರದಿ ಹೀಗಿದೆ: ಹಝ್ರತ್ ಅಬೂ ಸಲ್ಮಾ ಆ ವಿಶಿಷ್ಟ ಸಮಯದ ಬಗ್ಗೆ ವಿಚಾರಿಸಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: **ಆಖಿರು ಸಾಅತಿ ನಹಾರ್**. ಎಂದರೆ ದಿನದ ಕೊನೆಯ ಭಾಗದಲ್ಲಿ ಆ ಸಮಯವಿದೆ.

ಈ ವಿಷಯದ ಬಗ್ಗೆ ವಿಶದೀಕರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ತಫ್‌ಸೀರ್‌ನಲ್ಲಿ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ಜುಮುಅ ಮತ್ತು ರಮಝಾನ್ ಪರಸ್ಪರ ಸಾಮ್ಯತೆ ಹೊಂದಿವೆ. ಹೇಗೆಂದರೆ ಜುಮುಅ ದುಆ ಅಂಗೀಕರಿಸಲ್ಪಡುವ ದಿನವಾಗಿದೆ ಮತ್ತು ರಮಝಾನ್ ದುಆ ಅಂಗೀಕರಿಸಲ್ಪಡುವ ತಿಂಗಳಾಗಿದೆ. ಜುಮುಅದ ಬಗ್ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ: ಜುಮುಅದ ದಿನ ಒಬ್ಬನು ಮಸ್‌ಜಿದ್‌ಗೆ ಬಂದು ಮೌನವಾಗಿ ಕುಳಿತು ಝಿಕ್ರೆ ಇಲಾಹಿಯಲ್ಲಿ ತಲ್ಲೀನನನಾದರೆ ಮತ್ತು ಇಮಾಮರ ಆಗಮನವನ್ನು ಕಾಯುತ್ತಾ ಇದ್ದರೆ ಮತ್ತು ಅನಂತರ ಖುತ್‌ಬವನ್ನು ಸಮಾಧಾನದಿಂದ ಆಲಿಸಿ ಬಾಜಮಾಅತ್ ನಮಾಝ್ ನಿರ್ವಹಿಸಿದರೆ ಅವನಿಗೆ ಅಲ್ಲಾಹನಿಂದ ಅನುಗ್ರಹಗಳು ವಿಶಿಷ್ಟವಾಗಿ ಸುರಿಯುತ್ತವೆ. ಜುಮುಅದ ದಿನ ಎಂತಹ ಒಂದು ಘಳಿಗೆ ಇದೆ ಎಂದರೆ ಆಗ ದಾಸನು ಬೇಡಿಕೊಂಡದ್ದು ಎಲ್ಲವೂ ಅಂಗೀಕರಿಸಲ್ಪಡುತ್ತವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ: ದೈವಿಕ ನಿಯಮಗಳ ಪ್ರಕಾರ ಈ ಹದೀಸನ್ನು ವ್ಯಾಖ್ಯಾನಿಸಬೇಕಾಗಿದೆ. ಅಲ್ಲಾಹನ ನಡೆವಳಿಕೆ ಪ್ರಕಾರ ಮತ್ತು ದೈವಿಕ ನಿಯಮಗಳಿಗೆ ಅನುಸಾರವಾಗಿರುವ ಪ್ರಾರ್ಥನೆಗಳೇ ಅಂಗೀಕರಿಸಲ್ಪಡುವುವು. ಇದು ಬಹಳ ದೊಡ್ಡ ಅನುಗ್ರಹವಾಗಿದ್ದರೂ ಇದು ಸುಲಭ ಸಾಧ್ಯವೂ ಅಲ್ಲ. ಜುಮುಅದ ಸಮಯವು ಎರಡನೆಯ ಅಝಾನ್‌ನಿಂದ ಪ್ರಾರಂಭವಾಗುತ್ತದೆ ಅಥವಾ ಅದಕ್ಕಿಂತ ಸ್ವಲ್ಪ ಸಮಯ ಮೊದಲು ಪ್ರಾರಂಭವಾಗಿ ನಮಾಝ್ ನಂತರ ಸಲಾಮ್ ಹೇಳುವ ತನಕವಿರುತ್ತದೆ. ಇದು ಅಂದಾಜು ಒಂದು ಅಥವಾ ಒಂದೂವರೆ ಗಂಟೆಯ ಸಮಯವಾಗಿರುತ್ತದೆ. ಈ ಒಂದು ಅಥವಾ ಒಂದೂವರೆ ಗಂಟೆಯ ಕಾಲಾವಧಿಯ ಮಧ್ಯದಲ್ಲಿ ಒಂದು ಸಮಯ ಹೇಗಿರುತ್ತದೆ ಎಂದರೆ ಆಗ ಮನುಷ್ಯನು ಯಾವ ಪ್ರಾರ್ಥನೆ ಮಾಡಿದರೂ ಅಂಗೀಕರಿಸಲ್ಪಡುತ್ತದೆ. ಆದರೆ ಈ ಅಂದಾಜು 90 ನಿಮಿಷಗಳಲ್ಲಿ ಮೊದಲನೆಯ ನಿಮಿಷವೋ, ಎರಡನೆಯ ನಿಮಿಷವೋ ಅಥವಾ ಮೂರನೆಯ ನಿಮಿಷವೋ ದುಆ ಅಂಗೀಕಾರದ ಸಮಯವೆಂದು ಮನುಷ್ಯನಿಗೆ ತಿಳಿದಿರುವುದಿಲ್ಲ. 90 ನಿಮಿಷಗಳಲ್ಲಿ ಯಾವ ನಿಮಿಷ ಸಮಯದಲ್ಲಿ ದುಆ ಅಂಗೀಕರಿಸಲ್ಪಡುತ್ತದೆ ಎಂದು ಮನುಷ್ಯನಿಗೆ ತಿಳಿದಿರುವುದಿಲ್ಲ. ಆದುದರಿಂದ ದುಆ ಅಂಗೀಕರಿಸಲ್ಪಡುವ ಸಮಯವನ್ನು ಈ 90 ನಿಮಿಷಗಳೊಳಗೆ ಕಂಡುಹಿಡಿಯಬೇಕಾಗಿದೆ. ಆದುದರಿಂದ ಯಾರು ನಿರಂತರವಾಗಿ ಈ ತೊಂಬತ್ತು ನಿಮಿಷಗಳ ಕಾಲದಲ್ಲಿ ಪ್ರಾರ್ಥಿಸುತ್ತಾ ಇರುತ್ತಾನೋ ಅವನಿಗೆ ಆ ವಿಶಿಷ್ಟ ಸಮಯ ಸಹ ದೊರಕುವುದು. ಇಷ್ಟು ಸಮಯ ಶ್ರದ್ಧೆಯಿಂದ, ಏಕಾಗ್ರತೆಯಿಂದ ದುಆ ಮಾಡುತ್ತಿರುವುದು ಬಹಳ ಕಷ್ಟಕರವಾದ ಕೆಲಸವಾಗಿದೆ. ಇದು ಬಹಳ ಪರಿಶ್ರಮಪಡಬೇಕಾದ ಕೆಲಸವಾಗಿದೆ. ಏಕಾಗ್ರತೆಯನ್ನು ಕಾಪಾಡಿಕೊಂಡು ನಿರಂತರವಾಗಿ ಪ್ರಾರ್ಥನೆಯಲ್ಲಿ ಈ ಕಾಲಾವಧಿಯಲ್ಲಿ ಮಗ್ನನಾಗುವುದು ಅತ್ಯಾವಶ್ಯಕವಾಗಿದೆ. ಜುಮುಅದ ಅನುಗ್ರಹ ಗಳಿಸಲು ಬಹಳ ಕಷ್ಟಪಡಬೇಕಾದುದು ಆವಶ್ಯಕವಾಗಿದೆ.

ನಾನು ಪ್ರಸ್ತಾಪಿಸುವ ಇನ್ನೊಬ್ಬ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಮಝ್‌ಊನ್(ರ). ಅವರು ಖುರೈಶರ ಬನೂ ಜುಮಾಅ್ ವಂಶಕ್ಕೆ ಸೇರಿದ್ದರು. ಅವರು ಹಝ್ರತ್ ಖುದ್ದಾಮ ಬಿನ್ ಮಝ್‌ಊನ್ ಮತ್ತು ಹಝ್ರತ್ ಸಾಯಿಬ್ ಬಿನ್ ಮಝ್‌ಊನರ ಸಹೋದರರಾಗಿದ್ದರು. ಇವರೆಲ್ಲರೂ ಹಝ್ರತ್ ಅಬ್ದುಲ್ಲಾ ಬಿನ್ ಉಮರ್‌ರ ಸೋದರ ಮಾವಂದಿರಾಗಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಮಝ್‌ಊನ್ ಮತ್ತು ಹಝ್ರತ್ ಖುದ್ದಾಮ ಬಿನ್ ಮಝ್‌ಊನ್ ಇವರಿಬ್ಬರೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರ್ ಅರ್‌ಖಮ್‌ಗೆ ಹೋಗಿ ಇಸ್ಲಾಮಿಗೆ ಜನರನ್ನು ಆಹ್ವಾನಿಸುವ ಮೊದಲೇ ಮುಸ್ಲಿಮರಾಗಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಮಝ್‌ಊನ್ ತನ್ನಿಬ್ಬರು ಸಹೋದರರೊಂದಿಗೆ ಅಬಿಸೀನಿಯಾ ದೇಶಕ್ಕೆ ಹಿಜ್‌ರತ್ ಮಾಡಿದ್ದರು. ಅಲ್ಲಿದ್ದಾಗ ಅವರಿಗೆ ಒಂದು ವದಂತಿ ಲಭಿಸಿತು. ಖುರೈಶಿಗಳು ಮುಸ್ಲಿಮರಾದರೆಂದು. ಆಗ ಅವರು ಮಕ್ಕಕ್ಕೆ ಮರಳಿ ಬಂದರು.

ನಾನು ಹಿಂದೆ ಸಹ ಕೆಲವು ಸಹಾಬರ ಬಗ್ಗೆ ವಿವರಿಸುವಾಗ ಹೇಳಿದ್ದೆ. ಮಕ್ಕದಲ್ಲಿ ಹಿಂಸಾಚಾರ ವರ್ಧಿಸಿದಾಗ ಮುಸ್ಲಿಮರು ಅಬಿಸೀನಿಯಾ ದೇಶಕ್ಕೆ ಹಿಜ್‌ರತ್ ಮಾಡಬೇಕೆಂದೂ ಅಲ್ಲಿನ ದೊರೆ ನ್ಯಾಯ ನಿಷ್ಠನೆಂದೂ ಅವರ ರಾಜ್ಯದಲ್ಲಿ ಯಾರ ಮೇಲೆಯೂ ದೌರ್ಜನ್ಯ ನಡೆಯುತ್ತಾ ಇಲ್ಲವೆಂದೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು. ಅವರ ಉಪದೇಶ ಪ್ರಕಾರ ನಬಿವಿ ವರ್ಷ 5 ರಜಬ್ ತಿಂಗಳಲ್ಲಿ 11 ಪುರುಷರೂ 4 ಮಹಿಳೆಯರೂ ಅಬಿಸೀನಿಯಾ ದೇಶಕ್ಕೆ ಹಿಜ್‌ರತ್ ಮಾಡಿದರು. ಆ ದೇಶದಲ್ಲಿ ಮುಸ್ಲಿಮರಿಗೆ ಅತ್ಯಂತ ಶಾಂತಿಮಯ ಜೀವನ ಲಭಿಸಿತು. ಅವರಿಗೆ ಖುರೈಶಿಗಳ ಹಿಂಸಾಚಾರದಿಂದ ಮುಕ್ತಿ ದೊರಕಿತು. ಕೆಲವು ಚರಿತ್ರೆಗಾರರು ಬರೆದ ಪ್ರಕಾರ ಅಬಿಸೀನಿಯಾ ದೇಶಕ್ಕೆ ಹೋದ ಮುಸ್ಲಿಮರಿಗೆ ಒಂದು ವದಂತಿ ಲಭಿಸಿತು. ಖುರೈಶಿಗಳು ಮುಸ್ಲಿಮರಾದರೆಂದು. ಆಗ ಬಹುತೇಕ ವಲಸೆಗಾರರಾದ ಮುಸ್ಲಿಮರು ಯೋಚಿಸದೆ ಮಕ್ಕಕ್ಕೆ ಮರಳಿದರು. ಅವರು ಮಕ್ಕಕ್ಕೆ ತಲುಪಿದಾಗ ಆ ವದಂತಿ ಸುಳ್ಳೆಂದು ತಿಳಿಯಿತು. ಅದು ಅವರನ್ನು ಅಬಿಸೀನಿಯಾದಿಂದ ಬರುವಂತೆ ಮಾಡಲು ಅವಿಶ್ವಾಸಿಗಳು ಹೂಡಿದ ತಂತ್ರವಾಗಿತ್ತು. ಮರಳಿ ಬಂದವರು ಬಹಳ ಕಷ್ಟಗಳಿಗೆ ಪಾತ್ರರಾದರು. ಅವರಲ್ಲಿ ಕೆಲವರು ಮಾರ್ಗ ಮಧ್ಯದಿಂದಲೇ ಹಿಂತಿರುಗಿ ಹೋದರು. ಕೆಲವರು ಮಕ್ಕಕ್ಕೆ ಬಂದು ಪ್ರಭಾವಶಾಲಿಗಳ ಆಶ್ರಯ ಪಡೆದರು. ಆದರೆ ಅವರಿಗೆ ಹೆಚ್ಚು ಸಮಯ ಆಶ್ರಯ ಲಭಿಸಲಿಲ್ಲ. ಖುರೈಶಿಗಳ ದೌರ್ಜನ್ಯ ವರ್ಧಿಸಿತು. ಮಕ್ಕದಲ್ಲಿ ಮುಸ್ಲಿಮರಿಗೆ ಶಾಂತಿಯಿಂದ ಜೀವಿಸಲು ಸಾಧ್ಯವಿರಲಿಲ್ಲ. ಆದುದರಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪುನಃ ಮುಸ್ಲಿಮರೊಂದಿಗೆ ಹಿಜ್‌ರತ್ ಮಾಡಲು ಹೇಳಿದರು. ಆಗ ಮೊದಲು ಹಿಜ್‌ರತ್ ಮಾಡಿದವರಲ್ಲದೆ ಇತರ ಮುಸ್ಲಿಮರು ಸಹ ರಹಸ್ಯವಾಗಿ ಹಿಜ್‌ರತ್ ಮಾಡಲು ಸಿದ್ಧತೆ ನಡೆಸಿದರು. ಸಂದರ್ಭ ದೊರೆತಾಗ

ರಹಸ್ಯವಾಗಿ ಹೊರಡುತ್ತಾ ಇದ್ದರು. ಹಾಗೆ ಅಬಿಸೀನಿಯಕ್ಕೆ ಹಿಜ್‌ರತ್ ಮಾಡಿದವರ ಸಂಖ್ಯೆ ನೂರು ತಲಪಿತು. ಅವರಲ್ಲಿ 18 ಮಹಿಳೆಯರು ಮತ್ತು ಉಳಿದವರು ಪುರುಷರಾಗಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಮಝ್‌ಊನ್ ಅಬಿಸೀನಿಯಾಕ್ಕೆ ಹಿಜ್‌ರತ್ ಮಾಡಿ ಮರಳಿ ಮಕ್ಕಕ್ಕೆ ಬಂದಿದ್ದರು. ಅವರು ಪುನಃ ಅಬಿಸೀನಿಯಾಕ್ಕೆ ಹೋದರೋ ಇಲ್ಲವೋ ಎಂಬುದರ ಬಗ್ಗೆ ಮಾಹಿತಿ ಲಭಿಸುವುದಿಲ್ಲ.

ಹಝ್ರತ್ ಅಬ್ದುಲ್ಲಾ ಬಿನ್ ಮಝ್‌ಊನ್ ತಮ್ಮ ಮೂವರು ಸಹೋದರರಾದ ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್, ಹಝ್ರತ್ ಖದ್ದಾಮ ಬಿನ್ ಮಝ್‌ಊನ್ ಮತ್ತು ಹಝ್ರತ್ ಸಾಯಿಬ್ ಬಿನ್ ಮಝ್‌ಊನ್ ಜೊತೆಗೆ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಮಝ್‌ಊನ್ ಬದರ್, ಉಹುದ್, ಖಂದಕ್ ಮತ್ತು ಇತರ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದರು. ಅವರು ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ಹಿಜರಿ ವರ್ಷ 30ರಲ್ಲಿ ತನ್ನ ಅರುವತ್ತನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು. ಅಲ್ಲಾಹನು ಈ ಸಹಾಬರ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ–ಆಮೀನ್.

*****

اَلْحَمْدُ لِلّٰهِ نَحمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَ نَتَوَكَّلُ
عَلَيْهِ وَ نَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَ نَشْهَدُ اَنَّ مُحَمَّدًا عَبْدُهٗ وَ رَسُوْلُهٗ - عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَآءِ ذِي الْقُرْبٰى وَ يَنْهٰى
عَنِ الْفَحْشَاءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ-


***Friday Sermon delivered by Hadrath Khaleefatul Masih Al Khamis***(atba)

*At Masjid Baithul Futhuh, London, UK. On 16-08-2019*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon